# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೯

**ಹೋ**ಟೆಲಿಗೆ ಬಂದ ಶ್ರೀಮಾತೆ ವ್ಯವಸ್ಥೆಯೆಲ್ಲವನ್ನೂ ನೋಡಿ ತುಂಬ ಸಂತಸಗೊಂಡರು. ಕೃಷ್ಣಲಾಲ್ ಮತ್ತು ಗಣೇಂದ್ರನಾಥ ರಾತ್ರಿಯ ಗಾಡಿಗೆ ಕಲ್ಕತ್ತೆಗೆ ಹಿಂದಿರುಗಿದರು. ಊಟಕ್ಕೆ ಕುಳಿತಾಗ ಕೃಷ್ಣಲಾಲ್ ಹೇಳಿದ, ''ಎಷ್ಟೊಂದು ಬಗೆಯ ಅಡುಗೆ ಮಾಡಿದ್ದಾನೆ! ಸೂಕ್ತ∩ದಿಂದ ಹಿಡಿದು ಅಂಬಲಿಯವರೆಗೂ!''

ನಾಲ್ಕು ಎತ್ತಿನಗಾಡಿಗಳಲ್ಲಿ ಶ್ರೀಮಾತೆ ಹಾಗೂ ಅವರ ಬಳಗ, ಸಾಮಾನುಗಳು ಇವನ್ನೆಲ್ಲ ಸಾಗಿಸಿಕೊಂಡು, ಕತ್ತಲೆಗೆ ಮೊದಲೇ ಕೊತುಲ್‌ಪುರದ ಕಡೆಗೆ ಹೊರಟೆವು. ದಾರಿಯ ನಡುವೆ ಜಯಪುರದ ಬಳಿ ಒಂದು ಕಾಡು ಸಿಗುತ್ತದೆ. ಇಡೀ ರಾತ್ರಿ ಗಾಡಿಗಳು ಸಾಗಿ, ಬೆಳಗಿನ ಹೊತ್ತಿಗೆ ಕೊತುಲ್‌ಪುರ ತಲುಪಿದೆವು. ಅಲ್ಲಿ ಇನ್ಸ್‌ಪೆಕ್ಟರನ ಸಹಕಾರದಿಂದ ಹೋಟೆಲು ಹಾಗೂ ಬ್ರಾಹ್ಮಣರನ್ನು ಒದಗಿಸಿಕೊಂಡು, ಬೇಗನೆ ಅಡುಗೆ ಮಾಡಿ ಬಡಿಸಲಾಯಿತು. ಶ್ರೀಮಾತೆಗಾಗಿ ಒಂದು ಪಲ್ಲಕ್ಕಿಯ ವ್ಯವಸ್ಥೆಯನ್ನೂ ಮಾಡಲಾಯಿತು. ಆಹಾರದ ನಂತರ ಪಲ್ಲಕ್ಕಿಯಲ್ಲಿ ಶ್ರೀಮಾತೆ ಹಾಗೂ ರಾಧು, ಠಾಕೂರರನ್ನು (ಅವರ ಭಾವಚಿತ್ರವನ್ನು) ತೆಗೆದುಕೊಂಡು ಹೊರಟರು. ಆಗ ಜ್ಯೇಷ್ಠಮಾಸ; ವಿಪರೀತ ಸೆಖೆ. ಪಲ್ಲಕ್ಕಿಯಲ್ಲಿ ಒಂದು ಬೀಸಣಿಗೆ, ಒಂದು ಗಿಂಡಿಯಲ್ಲಿ ನೀರು ಇವನ್ನು ಇಡಲಾಯಿತು. ಉಳಿದವರೆಲ್ಲರೂ ಎತ್ತಿನಗಾಡಿಯಲ್ಲಿ ಬಳಸು ದಾರಿ ಮೂಲಕ ಹೊರಟು, ಸಾಯಂಕಾಲ ಕಳೆದು ಕತ್ತಲಾಗುವ ಹೊತ್ತಿಗೆ ಜಯರಾಮಬಾಟಿ ತಲುಪಿದೆವು.

ಈ ಬಾರಿ ನಾನು ಜಯರಾಮಬಾಟಿಯಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ತಂಗಿದ್ದೆ. ಪ್ರತಿದಿನ ಶ್ರೀಮಾತೆಯವರೊಂದಿಗೆ ನಾನಾಬಗೆಯ ಮಾತುಕತೆ ನಡೆಯುತ್ತಿತ್ತು. ಅವುಗಳಲ್ಲಿ ಉಲ್ಲೇಖಯೋಗ್ಯವೆನಿಸಿದ ಕೆಲವನ್ನು ಇಲ್ಲಿ ಬರೆಯುತ್ತಿದ್ದೇನೆ:

ಒಂದು ದಿನ ಮಾತುಕತೆಯ ನಡುವೆ ಶ್ರೀಮಾತೆ ಹೇಳಿದರು: ''ಮೊದಮೊದಲು ಗಂಡನ ಮನೆಗೆ ಅಂತ ಕಾಮಾರಪುಕುರಕ್ಕೆ ಹೋದಾಗ ಹಾಲದಾರಪುಕುರಕ್ಕೆ ಸ್ನಾನ ಮಾಡಲು ಹೋಗಬೇಕಿತ್ತು. ಹೊಸದಾಗಿ ಬಂದ ಸೊಸೆ, ಅದೂ ಅಲ್ಲದೆ ಚಿಕ್ಕ ಮಗು ನಾನು — ಭಯದಿಂದ ನಡುಗುತ್ತಿದ್ದೆ. ಜನರ ಮುಂದೆ ಹೇಗೆ ಓಡಾಡಲಿ? ಹೆದರುತ್ತ ಮನೆಯಿಂದ ಹೊರಗಿಳಿದೆ. ಆಗ ನೋಡುತ್ತಿದ್ದಂತೆಯೆ ಎಂಟು ಮಂದಿ ಹೆಣ್ಣುಮಕ್ಕಳು, ನನ್ನದೇ ವಯಸ್ಸಿನವರು; ಬಂದು ನನ್ನನ್ನು ಸೇರಿಕೊಂಡರು. ನನ್ನ ಸುತ್ತ ನಿಂತು ಅವರೆಂದರು, 'ಸ್ನಾನಕ್ಕೆ ಹೋಗುತ್ತೀಯಾ? ನಡೆ, ನಾವು ನಿನ್ನ



ಸುತ್ತ ಸುತ್ತಿಕೊಂಡು ಕರೆದೊಯ್ಯುತ್ತೇವೆ. ಯಾರೂ ನೋಡಲಾರರು.' ನಾನು ಕೇಳಿದೆ, 'ನೀವೆಲ್ಲ ಯಾರಮ್ಮಾ?' ಅದಕ್ಕವರು, 'ನೀನು ಹೊಸದಾಗಿ ಬಂದ ಸೊಸೆಯಲ್ಲವೆ? ನಾವು ನಿನ್ನ ಸ್ನೇಹಿತೆಯರು. ನಿನ್ನ ಮನೆಯ ಸಮೀಪದಲ್ಲೇ ವಾಸ ಮಾಡುತ್ತಿದ್ದೇವೆ' ಎಂದರು. ನೆರೆಮನೆಯ ಹುಡುಗಿಯರು ಇರಬೇಕು ಎಂದುಕೊಂಡೆ. ಅವರು ನನ್ನನ್ನು ಕರೆದುಕೊಂಡು ಹೋದರು. ನಾಲ್ಕು ಮಂದಿ ನನ್ನ ಮುಂದೆ, ನಾಲ್ಕು ಮಂದಿ ನನ್ನ ಹಿಂದೆ. ಸ್ನಾನ ಮುಗಿಸಿದ ನಂತರ ಮತ್ತೆ ಮನೆಯ ತನಕವೂ ಕರೆದುಕೊಂಡು ಬಂದರು. ಹೋಗುವ ವೇಳೆಗೆ ಹೇಳಿದರು, 'ನಾವು ಪ್ರತಿದಿನವೂ ನಿನ್ನನ್ನು ಹುಡುಕಿ, ನಿನ್ನನ್ನು ಕರೆದುಕೊಂಡು ಹೋಗುತ್ತೇವೆ. ಮತ್ತೆ ಕರೆದುಕೊಂಡು ಬಂದು ತಲುಪಿಸುತ್ತೇವೆ. ನೀನು ನಮ್ಮ ಸ್ನೇಹಿತೆ

∩ ಒಂದು ಬಗೆಯ ಬಂಗಾಳಿ ಪಲ್ಯ. *(–ಅನು.)*

ಯಲ್ಲವೆ?' ಎಂದರು. ಅಂದಿನಿಂದ ಪ್ರತಿದಿನವೂ ನನ್ನನ್ನು ಕರೆದುಕೊಂಡು ಹೋಗಿ, ಮರಳಿ ಬಂದು ತಲುಪಿಸುತ್ತಿದ್ದರು.''

ನಾನು ಶ್ರೀಮಾತೆಯನ್ನು ಕೇಳಿದೆ, ''ಅವರೇನು, ಮಹಾಮಾಯಾರೂಪಿಣಿಯಾದ ನಿಮ್ಮ ಅಷ್ಟಸಖಿಯರೆ?'' ಅದಕ್ಕೆ ಶ್ರೀಮಾತೆ, ''ಯಾರಿಗೆ ಗೊತ್ತು ಮಗೂ! ನಿನಗೆ ಈ ವಿಷಯವೆಲ್ಲ ಬರೀ ತಮಾಷೆ'' ಎಂದರು. ನಾನೆಂದೆ, ''ನೀವು ವಿಷಯ ಮರೆಸಬೇಡಿ. ಬೂದಿಮುಚ್ಚಿದ ಬೆಕ್ಕಲ್ಲವೆ!'' ಅದಕ್ಕೆ ಅವರು ಮೆಲುನಗೆ ನಕ್ಕರು.

ಒಂದು ಬಾರಿ ಅವರನ್ನು ಕೇಳಿದೆ: ''ಅಮ್ಮಾ, ಠಾಕೂರರ ಭಕ್ತ ಹರೀಶ ನಿಮ್ಮನ್ನು ಆಕ್ರಮಿಸಿದ ಎಂದು ಕೇಳಿದ್ದೇನೆ — ಅದು ನಿಜವೆ?'' ಶ್ರೀಮಾತೆ ಹೇಳತೊಡಗಿದರು: ''ಹೌದು ಮಗೂ, ಹರೀಶ ತುಂಬ ಒಳ್ಳೆಯವ, ಈಶ್ವರಕೋಟಿ (?). ಅವನ ಹೆಂಡತಿ ಅವನಿಗೆ ಔಷಧಿ ತಿನ್ನಿಸಿದಳು. ಅದರಿಂದಾಗಿ ಅವನ ತಲೆ ಕೆಟ್ಟು ಹೋಯಿತು. ಅಂದು ಕಾಮಾರಪುಕುರದ ಮನೆಯಲ್ಲಿ ನನ್ನ ಹೊರತು ಬೇರೆ ಯಾರೂ ಇರಲಿಲ್ಲ. ಅವನಿಂದ ತಪ್ಪಿಸಿಕೊಳ್ಳಲು ಹೋಗಿ ಧಾನ್ಯದ ಒಟ್ಟನ್ನು ಏಳು ಬಾರಿ ಸುತ್ತಿ, ನಾಲ್ಕೂ ಕಡೆ ಓಡಾಡಿ, ಬಸವಳಿದು ಬಿದ್ದುಬಿಟ್ಟೆ. ಇನ್ನೇನು ಮಾಡಲೂ ದಾರಿಯಿಲ್ಲದಾಗ ಏನು ಭಾವವೆದ್ದು ಬಂತೋ ಗೊತ್ತಿಲ್ಲ , ಅವನನ್ನು ಕೆಡವಿ, ಅವನ ಎದೆಯ ಮೇಲೆ ಮೊಣಕಾಲೂರಿ ಕುಳಿತು, ಒಂದು ಕೈಯಿಂದ ಅವನ ನಾಲಿಗೆಯನ್ನು ಎಳೆದು, ಇನ್ನೊಂದು ಕೈಯಿಂದ ಅವನ ಕೊರಳ ಮೇಲೆ ಒಂದೇಟು ಕೊಟ್ಟೆ. ನನ್ನ ಕೈಯಲ್ಲಿ ಬಾವು ಬಂದುಬಿಟ್ಟಿತ್ತು. ಅವನು ಹಾಹಾಕಾರ ಮಾಡುತ್ತ ಉಸಿರುಗಟ್ಟಿ ಒದ್ದಾಡುತ್ತಿದ್ದ. 'ಈಗ ಸಾಕು' ಅಂತ ಅನ್ನಿಸಿತು; ಆಗ ಬಿಟ್ಟುಬಿಟ್ಟೆ. ನಂತರ ಅವನು ಬರಲಿಲ್ಲ. ನಿರಂಜನನೆಂದರೆ ಯಮನನ್ನು ಕಂಡ ಹಾಗೆ ಹೆದರುತ್ತಿದ್ದ. ಅವನು ಚೆನ್ನಾಗಿ ಏಟು ಕೊಡುತ್ತಿದ್ದನಲ್ಲವೆ!''

ನಾನು ಕೇಳಿದೆ: ''ಆಗ ನೀವು ಬಗಲಾ ಮೂರ್ತಿಯ ರೂಪ ಧರಿಸಿದಿರಾ? ಬೇಲೂರು ಮಠದಲ್ಲಿ ಹಾಗೆ ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ.'' ಅದಕ್ಕೆ ಶ್ರೀಮಾತೆ, ''ಯಾರಿಗೆ ಗೊತ್ತು ಮಗೂ, ಆಗ ನಾನು ನಾನಾಗಿರಲಿಲ್ಲ'' ಎಂದರು. ನಾನೆಂದೆ, ''ನೀವು ಸಿಕ್ಕಿ ಹಾಕಿಕೊಳ್ಳಲಾರಿರಿ. 'ಬೂದಿ ಮುಚ್ಚಿದ ಬೆಕ್ಕು' ತಾನೆ?'' ಮತ್ತೆ ಅವರು ಮೆಲುನಗೆ ನಕ್ಕರು.

ಇನ್ನೊಂದು ಸಲ ಅವರು ಶ್ರೀರಾಮಕೃಷ್ಣರಿಗೋಸ್ಕರ ತಾರಕೇಶ್ವರದಲ್ಲಿ ವ್ರತ ಹಿಡಿದು ಕುಳಿತ ವಿಷಯವಾಗಿ ಹೇಳಿದರು: ''ಯಾವುದರಿಂದಲೂ ಏನೂ ಪ್ರಯೋಜನವಾಗದೆ ಹೋದಾಗ ತಾರಕನಾಥನ ಬಳಿ ವ್ರತ ಹಿಡಿದರೆ ಆದೀತೇನೋ ಅಂತ ಅನ್ನಿಸಿತು. ಅದಕ್ಕೆ ಠಾಕೂರರು ತಡೆಯಲಿಲ್ಲ. ಎರಡು ದಿನಗಳ ಕಾಲ ವ್ರತ ಹಿಡಿದು ಕುಳಿತಿದ್ದೆ. ನಡುರಾತ್ರಿ ನಿದ್ರೆ ಹತ್ತಿದ್ದಾಗ ಹಠಾತ್ತನೆ ಒಂದು ಸದ್ದಾಗಿ ನಿದ್ದೆ ಬಿಟ್ಟೆದ್ದೆ. ಕುಂಬಾರನ ಮನೆಯಲ್ಲಿ ಮಡಕೆಗಳ ಸಾಲಿನ ಮೇಲೆ ಒಂದು ಬೆತ್ತದಿಂದ ಹೊಡೆದುಬಿಟ್ಟರೆ ಹೇಗಾದೀತೋ ಹಾಗೆ ಸದ್ದಾಯಿತೆಂದು ನನ್ನ ಭಾವನೆ. ಜೊತೆಗೇ ಅನ್ನಿಸಿತು, ದೇಹವೆಂದರೆ ಇಷ್ಟೇ ತಾನೆ! ಈ ದೇಹ ಇದ್ದರೆಷ್ಟು, ಬಿಟ್ಟರೆಷ್ಟು? ಇದೂ ಅದೇ ರೀತಿ ಒಡೆದು ಹೋಗುವುದು. ಸಂಸಾರದಲ್ಲಿ ಯಾರು ಯಾರಿಗೆ ಪತಿ, ಯಾರು ಯಾರಿಗೆ ಪತ್ನಿ? ಇವೆಲ್ಲ ಒಂದು ದಿನ ಒಡೆದು ಹೋಗುವುದು ತಾನೆ! ಯಾರು ಯಾರಿಗೂ ಏನೂ ಅಲ್ಲ. ಮನುಷ್ಯ ಶರೀರವನ್ನು ಧರಿಸಿದ ಮೇಲೆ ಇದೇ ರೀತಿ ಒಡೆದು ಹೋಗುವುದು. ಇನ್ನು ಯಾರ ಸಲುವಾಗಿ ವ್ರತ ಹಿಡಿಯಲಿ! ನನ್ನ ಪಾಲಿಗೆ ಜಗತ್ತು ಶೂನ್ಯವಾಗಿ ಹೋಯಿತು. ನಿಧಾನವಾಗಿ ತೆವಳುತ್ತ ದೇವಾಲಯದ ಹಿಂಭಾಗಕ್ಕೆ ಬಂದೆ. ಗಟಾರದಿಂದ ಸ್ನಾನ ಮಾಡುವ ನೀರನ್ನು ತೆಗೆದುಕೊಂಡು, ಮುಖದ ಮೇಲೆ, ಕಣ್ಣಿನ ಮೇಲೆ ಎರಚಿಕೊಂಡೆ. ಬೆಳಗಾದ ಮೇಲೆ ಮರಳಿ ಬಂದೆ. ನಾನು ಮರಳಿ ಬಂದುದನ್ನು ಕಂಡು ಠಾಕೂರ್ ಸನ್ನೆ ಮಾಡಿ 'ಏನಾಯಿತು?' ಎಂದು ಕೇಳಿದರು; ಅನಂತರ ಹೆಬ್ಬೆರಳನ್ನು ಅಲುಗಾಡಿಸುತ್ತ, 'ಎಲ್ಲ ವಿಫಲವೆಂದು ತಿಳಿಯಿತಲ್ಲಾ?' ಎಂದು ತಿಳಿಸಿದರು.''

ಕೆಲವೊಂದು ದಿನ ಶ್ರೀಮಾತೆ ಠಾಕೂರ್ ಹಾಗೂ ತಮ್ಮ ಬಗ್ಗೆ ಕೆಲವು ಮಹತ್ವಪೂರ್ಣ ಸಂಗತಿಗಳನ್ನು ಹೇಳುತ್ತಿದ್ದರು. ಒಂದು ದಿನ ಈ ರೀತಿ ಕೆಲವು ಘಟನೆಗಳನ್ನು ಒಂದಾದ ಮೇಲೊಂದು ಹೇಳತೊಡಗಿದರು. ಅವುಗಳಲ್ಲಿ ನನಗೆ ನೆನಪಾಗುವ ಕೆಲವನ್ನು ಇಲ್ಲಿ ನೀಡುತ್ತಿದ್ದೇನೆ:

''ಗೋಲಾಪ್ ಏನು ಕಡಿಮೆಯೆ? ದಕ್ಷಿಣೇಶ್ವರದಲ್ಲಿ ನಾನು ಠಾಕೂರರ ಬಳಿಗೆ ಹೋಗುತ್ತಿದ್ದೆ ಅಂತ ಅವಳಿಗೆ ಅಸೂಯೆಯಾಗುತ್ತಿತ್ತು. ಒಂದು ದಿನ ಅವಳು ಹೇಳಿಯೇ ಬಿಟ್ಟಳು, 'ನೀವೇಕೆ ಠಾಕೂರರ ಬಳಿಗೆ ಹೋಗುತ್ತೀರಾ?' ಅಂತ. ಯಾರಾದರೂ ಒಂದು ಮಾತು ಹೇಳಿಬಿಟ್ಟರೆ ನನಗೆ ಸಹಿಸಲಾಗುತ್ತಿರಲಿಲ್ಲ. ಇನ್ನೊಬ್ಬರು ಆಡಿಕೊಳ್ಳುವಂತಹ ಕೆಲಸವನ್ನೇನೂ ನಾನು ಮಾಡಿಲ್ಲ, ಇನ್ನು ಇವಳ ಮಾತನ್ನಾದರೂ ಏಕೆ ಕೇಳಬೇಕು? ಹಾಗೆಂದು ನಾನು ಅಲ್ಲಿಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟೆ. ಆ ದಿನಗಳು ಹೇಗೆ ಕಳೆದವು! ದಿನ ಕಳೆಯುವಾಗ ಠಾಕೂರರು ಒಂದು ಸಲ ಝಾವುತಲಾಗೆ (ಶೌಚಾದಿಗಳಿಗೆ) ಹೋಗುವಾಗ ಮಾತ್ರ ನನಗೆ ನೋಡಲಾಗುತ್ತಿತ್ತು, ಇಲ್ಲದಿದ್ದರೆ ಇಲ್ಲ — ಅದೂ ದೂರದಿಂದ. ನಾನು ಅಷ್ಟರಲ್ಲೇ ತೃಪ್ತಿ ಹೊಂದುತ್ತಿದ್ದೆ.

''ಕಾಮಾರಪುಕುರದಲ್ಲಿ ಹಾಗೂ ಇಲ್ಲಿ, ಹೆಣ್ಣುಮಕ್ಕಳು ಏನೇನೋ ಹೇಳುತ್ತಿದ್ದರು. ಮಕ್ಕಳಾಗದಿದ್ದರೆ ಯಾವ ಕಾರ್ಯದಲ್ಲೂ ಹೆಂಗಸರು ಭಾಗವಹಿಸುವಂತಿಲ್ಲ, ಬಂಜೆಯಾದವರು ಯಾವುದೇ ಶುಭಕಾರ್ಯಗಳಲ್ಲಿ ಮುತ್ತೈದೆಯಾಗಿ ಪಾಲ್ಗೊಳ್ಳುವ ಹಾಗಿಲ್ಲ ಎನ್ನುತ್ತಿದ್ದರು. ಆಗ ನಾನಿನ್ನೂ ಚಿಕ್ಕವಳಾಗಿದ್ದೆ. ಈ ಮಾತುಗಳನ್ನೆಲ್ಲ ಕೇಳಿ ನನ್ನ ಮನಸ್ಸಿಗೆ ದುಃಖವಾಗುತ್ತಿತ್ತು. 'ಹಾಗಾದರೆ ನನಗೆ ಒಂದೂ ಮಗುವಾಗದೆ?' ಅನ್ನಿಸುತ್ತಿತ್ತು. ದಕ್ಷಿಣೇಶ್ವರಕ್ಕೆ ಹೋದಾಗ ಒಂದು ಸಲ ಆ ಮಾತು ನೆನಪಾಯಿತು. ಹಾಗೆ ನೆನಪಾದ ದಿನ — ನಾನು ಯಾರಿಗೂ ಅದನ್ನು ಹೇಳಿರಲಿಲ್ಲ;

ಠಾಕೂರರು ತಾವಾಗಿಯೇ ಹೇಳಿದರು, 'ನೀನೇಕೆ ಚಿಂತಿಸುತ್ತಿದ್ದೀಯಾ? ನಿನಗೆ ರತ್ನದಂತಹ ಮಕ್ಕಳನ್ನೇ ಕೊಟ್ಟು ಹೋಗುತ್ತೇನೆ ನೋಡು. ತಲೆಯನ್ನೇ ಕತ್ತರಿಸಿ ತಪಸ್ಸು ಮಾಡಿದರೂ ಅಂಥ ಮಕ್ಕಳು ಸಿಗಲಾರರು. ಆಮೇಲೆ ನೀನೇ ನೋಡುವೆ, ಎಷ್ಟೊಂದು ಮಕ್ಕಳು ನಿನ್ನನ್ನು 'ಅಮ್ಮಾ' ಎಂದು ಕರೆಯುವರೆಂದರೆ, ನಿನಗೆ ಅವರನ್ನು ನೋಡಿಕೊಳ್ಳುವುದೇ ಕಷ್ಟವಾಗುವುದು' ಅಂತ.

''ಗೋಲಾಪ್ ಆ ಮಾತನ್ನು ಹೇಳಿದ ಮೇಲೆ ಕೆಲವು ದಿನ ಠಾಕೂರರ ಬಳಿಗೆ ನಾನು ಹೋಗಲಿಲ್ಲ. ಆಮೇಲೆ ಹೋಗಬೇಕಾಗಿ ಬಂದಾಗ ಕೇಳಿದೆ, 'ನಾನು ನಿಮಗೆ ಏನಾಗಿದ್ದೇನೆ?' ಆಗ ಅವರು ಕಾಳೀಮಂದಿರದತ್ತ ತೋರಿಸಿ, 'ಅಲ್ಲಿ ಯಾರಿದ್ದಾರೋ' ಎಂದು, ಬಳಿಕ ನನ್ನತ್ತ ತೋರಿಸಿ, 'ಇಲ್ಲೂ ಅವಳೇ ಇದ್ದಾಳೆ' ಎಂದರು.''

ಶ್ರೀಮಾತೆ ಈ ವಿಷಯವನ್ನು ಹೇಳಿದಾಗ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆಯೆದ್ದಿತು. ಅದನ್ನು ನನಗೆ ಕೇಳದಿರಲಾಗಲಿಲ್ಲ. ಕೇಳಿದೆ, ''ಅಮ್ಮಾ, ಸುಬೋಧ ಮಹಾರಾಜರಿಂದ [೨] ಕೇಳಿದ್ದೆ, ಠಾಕೂರರ ದೇಹತ್ಯಾಗವಾದ ನಂತರ ನೀವು, 'ನನ್ನಮ್ಮ ಕಾಳೀ, ಎಲ್ಲಿಗೆ ಹೋಗಿಬಿಟ್ಟೆಯಮ್ಮಾ!' ಎಂದು ಅಳತೊಡಗಿದರಂತೆ? ಹೌದೆ?'' ಅದಕ್ಕೆ ಶ್ರೀಮಾತೆ ಉತ್ತರಿಸಿದರು, ''ಅದೊಂದೂ ನನಗೆ ಅಷ್ಟಾಗಿ ನೆನಪಿಲ್ಲ, ಮಗೂ.'' ನಾನೂ ಬಿಡಲಿಲ್ಲ. ಮತ್ತೆ ಅವರನ್ನು ಕೇಳಿದೆ, ''ನಿಮ್ಮ ದೃಷ್ಟಿಯಿಂದ ನೀವು ಅವರನ್ನು ಯಾವ ಭಾವದಿಂದ ನೋಡುತ್ತಿದ್ದಿರಿ?'' ಮೊದಲು ಅವರ ಕಡೆಯಿಂದ ಸರಿಯಾದ ಉತ್ತರ ಬರಲಿಲ್ಲ. ಬಹಳ ಹೊತ್ತು ಎಳೆದಾಡಿದ ನಂತರ ಸ್ಪಷ್ಟ ಉತ್ತರ ಲಭಿಸಿತು: ''ನಾನೂ ಅದೇ ರೀತಿ ನೋಡುತ್ತಿದ್ದೆ'' ಎಂದರು.

ಮೇಲಿನ ಮಾತುಕತೆಗಳಾದ ನಂತರ ಯಾಕೋ, ಶ್ರೀಮಾತೆಯವರ ಮನಸ್ಸು ಠಾಕೂರರ ದೇಹತ್ಯಾಗದ ಕಡೆಗೇ ಹರಿಯಿತು. ಅವರು ಮತ್ತೆಮತ್ತೆ ಆ ವಿಷಯವನ್ನು ಕುರಿತೇ ಹೇಳತೊಡಗಿದರು: ''ಆ ದಿನ ಬೆಳಗಿನಿಂದಲೇ ಎಲ್ಲವೂ ಮೇಲುಕೆಳಗೆ ಆಗುತ್ತಿದ್ದವು. ಮಕ್ಕಳಿಗೋಸ್ಕರ (ಶಿಷ್ಯಂದಿರು) ಖಿಚುಡಿ ಮಾಡುತ್ತಿದ್ದೆ, ಅದರ ತಳ ಹಿಡಿದುಕೊಂಡಿತು. ಮೇಲ್ಭಾಗವನ್ನು ಅವರಿಗೆ ನೀಡಿದೆ, ತಳದ ಭಾಗವನ್ನು ನಾವು ಉಂಡೆವು. ನನ್ನದೊಂದು ಕೆಂಪಂಚು ಸೆರಗಿನ ದೇಸೀ ಸೀರೆಯಿತ್ತು. ಅದೆಲ್ಲಿ ಕಾಣೆಯಾಯಿತೋ — ಬಹುಶಃ ಯಾರೋ ಕದ್ದುಬಿಟ್ಟರು. ನೀರಿಡುವ ಮಡಕೆಯಿತ್ತು, ಅದನ್ನು ಎತ್ತಿಕೊಳ್ಳಲು ಹೋದರೆ, ಕೈಯಿಂದ ಬಿದ್ದು ಒಡೆದುಹೋಯಿತು!''

ಶ್ರೀಮಾತೆ ಸುತ್ತಿ ಬಳಸಿ, ಮತ್ತೆ ಆ ವಿಷಯಕ್ಕೇ ಬಂದು ಹೇಳತೊಡಗಿದರು: ''ಒಂದು ದಿನ ದಕ್ಷಿಣೇಶ್ವರದಲ್ಲಿ ಊಟದ ತಟ್ಟೆಯನ್ನು ತೆಗೆದುಕೊಂಡು ಠಾಕೂರರ ಕೋಣೆಯನ್ನು ಪ್ರವೇಶಿಸುತ್ತಿದ್ದೆ. ಒಬ್ಬಾಕೆ ಹೆಣ್ಣುಮಗಳು ಬಂದು, 'ನನಗೆ ಕೊಡಿ ಅಮ್ಮಾ, ನಾನು ತೆಗೆದುಕೊಂಡು ಹೋಗುತ್ತೇನೆ' ಎಂದಳು. ಸುಮ್ಮನೆ ಅವಳ ಕೈಗೆ ಕೊಟ್ಟುಬಿಟ್ಟೆ. ಆದರೆ ಠಾಕೂರರು ಅದನ್ನು ಊಟಮಾಡಲು ಕುಳಿತುಕೊಳ್ಳಲೇ ಇಲ್ಲ. ಆ ಹೆಣ್ಣುಮಗಳು ತಟ್ಟೆಯನ್ನು ಅಲ್ಲಿಟ್ಟು ಹೋಗಿಬಿಟ್ಟಳು. ನಾನು ಕೇಳಿದಾಗ ಠಾಕೂರರೆಂದರು, 'ನೀನೇಕೆ ಅವಳ ಕೈಗೆ ಕೊಟ್ಟುಬಿಟ್ಟೆ? ಅವಳು ಎಂಥವಳೆಂದು ನಿನಗೆ ಗೊತ್ತಿಲ್ಲವೆ? ಈಗ ಅವಳು ಸ್ಪರ್ಶಿಸಿದ್ದನ್ನು ನಾನು ಹೇಗೆ ತಿನ್ನಲಿ?' ಬಹಳ ಒತ್ತಾಯ ಮಾಡಿದ ಮೇಲೆ ಅವರೇನೋ ಊಟಕ್ಕೆ ಕುಳಿತರು, ಆದರೆ ಇನ್ನೆಂದಿಗೂ ಆಕೆಯ ಕೈಗೆ ತಟ್ಟೆ ಕೊಡಬಾರದೆಂದು ಹೇಳಿಬಿಟ್ಟರು. ನಾನು ಕೈಜೋಡಿಸಿ ಹೇಳಿದೆ, 'ಅದು ನನ್ನ ಕೈಲಿ ಸಾಧ್ಯವಿಲ್ಲ ಠಾಕೂರ್. ಯಾರಾದರೂ ನನ್ನನ್ನು 'ಅಮ್ಮಾ' ಅಂತ ಕರೆದಾಗ ನನಗೆ ಸುಮ್ಮನಿರಲಾಗದು. ನೀವಂತೂ ಕೇವಲ ನನಗೆ ಠಾಕೂರ್ ಅಲ್ಲ; ನೀವು ಎಲ್ಲರ ಠಾಕೂರ್ ಅಲ್ಲವೆ?' ಆಗ ಅವರು ಆನಂದಗೊಂಡು ಊಟ ಮಾಡಿದರು.

''ಠಾಕೂರ್ ಮಾತನಾಡತೊಡಗಿದರೆಂದರೆ ಹೇಳುತ್ತಲೇ ಹೋಗುತ್ತಿದ್ದರು, ಮುಕ್ತಾಯಗೊಳಿಸಲು ಇಚ್ಛಿಸುತ್ತಿರಲಿಲ್ಲ. ನಾನು ಕೇಳುತ್ತ ಕೇಳುತ್ತ ನೆಲದಲ್ಲೇ ಸೆರಗು ಹಾಸಿ ಮಲಗಿಬಿಡುತ್ತಿದ್ದೆ. ಹೆಣ್ಣುಮಕ್ಕಳು ನನ್ನನ್ನು ಎಬ್ಬಿಸಿ ಕುಳ್ಳಿರಿಸಲು ಯತ್ನಿಸುತ್ತ 'ಅಂಥ ಅದ್ಭುತ ಮಾತನ್ನು ಕೇಳಲೇ ಇಲ್ಲವಲ್ಲ?' ಎನ್ನುತ್ತಿದ್ದರು. ಆಗ ಠಾಕೂರ್ ಅವರನ್ನು ತಡೆದು, 'ಅವಳನ್ನು ಎಬ್ಬಿಸಬೇಡ. ಎಲ್ಲವನ್ನೂ ಕೇಳಿಬಿಟ್ಟರೆ ಅವಳು ಬದುಕಿ ಉಳಿಯಲಾರಳು, ದಿಢೀರನೆ ಎಲ್ಲ ಬಿಟ್ಟು ಹೋಗಿಬಿಡುವಳು' ಎನ್ನುತ್ತಿದ್ದರಂತೆ. ''

ಒಂದು ಸಲ ಶ್ರೀಮಾತೆಯವರನ್ನು ಕೇಳಿದೆ, ''ಸ್ವಾಮೀಜಿಯವರಿಂದ ಕೇಳಿದ್ದೆ, 'ಠಾಕೂರರು ಬಲರಾಮ ಬಾಬುವಿನ ಮನೆಯ ಅನ್ನ ಊಟಮಾಡುತ್ತಿದ್ದರು' ಅಂತ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಹೌದು, ಅವರು ನನಗೆ ಹೇಳಿದ್ದರು, 'ನನ್ನ ಬಲರಾಮನ ಅನ್ನ ಶುದ್ಧ ಅನ್ನ. ಅವರು ಜಗನ್ನಾಥನಿಗೆ ನೈವೇದ್ಯ ನೀಡುತ್ತಾರೆ. ನೀನು ಅಲ್ಲಿ ಊಟ ಮಾಡಬಹುದು' ಅಂತ.''

ಸ್ವಾಮೀಜಿ ಹಾಗೂ ಬಾಬುರಾಮ ಮಹಾರಾಜರು ಸ್ಪರ್ಶಿಸಿದ ಅನ್ನವನ್ನು ಠಾಕೂರರು ಊಟಮಾಡುತ್ತಿದ್ದರೆ? ಈ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ಹೇಳಿದರು: ''ಅವರು ನರೇನ್‌ನನ್ನು ಎಲ್ಲದರಲ್ಲೂ ಎಳೆಯುತ್ತಿರಲಿಲ್ಲ. ಮತ್ತೆ ಬಾಬುರಾಮ? ಅವನು ಈಶ್ವರಕೋಟಿ. ಅವನದು ಶ್ರೀಮತಿಯ (ಶ್ರೀರಾಧೆಯ) ಭಾವ — ಠಾಕೂರ್ ಹೇಳುತಿದ್ದರು.''

ಅದರ ನಂತರ ನಾನು ಕೆಲವು ಬಾರಿ ಜಯರಾಂಬಾಟಿಗೆ ಹೋಗಬೇಕಾಗಿ ಬಂತು. ಪ್ರತಿಬಾರಿಯೂ ಒಂದು ತಿಂಗಳಿಗಿಂತ ಕಡಿಮೆಯಿಲ್ಲದಂತೆ ಅಲ್ಲಿ ತಂಗಿದ್ದೆ. ಒಂದು ಸಲ ಒಂದೂವರೆ ತಿಂಗಳು ಅಲ್ಲಿದ್ದೆ. ಹೆಚ್ಚಿನ ಸಲವೂ ನಾನೊಬ್ಬನೇ ಹೋಗಿದ್ದೆ. ಒಂದು ಸಲ ನಿತ್ಯಗೋಪಾಲನ ಶಿಷ್ಯ ಹಾಗೂ ನಾದು (ಬ್ರಹ್ಮಚಾರಿ ಹರೇಂದ್ರನಾಥ)[೩] ನನ್ನೊಂದಿಗಿದ್ದರು. ಇನ್ನೊಂದು ಸಲ ಕಾಳೀಕೃಷ್ಣ ಮಹಾರಾಜ್, ಮತ್ತೊಮ್ಮೆ ಡಾಕ್ಟರ್ ಕಂಜೀಲಾಲ್ ಹಾಗೂ

೨ ಸ್ವಾಮಿ ಸುಬೋಧಾನಂದರು. *(–ಸಂ)*

೩. ಸ್ವಾಮೀಜಿಯವರ ಅಳಿಯ.

ಮಗದೊಮ್ಮೆ ಶ್ರೀಮಾತೆ, ಗೋಲಾಪ್ ಮಾ ಹಾಗೂ ಕುಸುಮ ಜೊತೆಗಿರುತ್ತಿದ್ದರು. ಜಯರಾಮಬಾಟಿ ತಲುಪುವ ವೇಳೆಗೆ ಕೆಲವೊಮ್ಮೆ ಕೊತುಲ್‌ಪುರ ಮೂಲಕ ಕಾಲುನಡಿಗೆಯಲ್ಲೋ, ಕೆಲವೊಮ್ಮೆ ಕಾಮಾರಪುಕುರದ ಮೂಲಕ ನಡೆಯುತ್ತ ಅಂಗಡಿಯಿಂದ ಸಾಮಾನುಗಳನ್ನು ಕೊಂಡುಕೊಂಡೋ ಹೋಗುತ್ತಿದ್ದೆ. ಕಾಮಾರಪುಕುರದ ಕಪ್ಪು ಬಣ್ಣದ ಮರ ಬಹಳ ಪ್ರಸಿದ್ಧ. ಗುಡುಗುಡಿಯ ಪೈಪು, ಲಟ್ಟಣಿಗೆ, ಹುಂಕಾರ್ ಇತ್ಯಾದಿಗಳನ್ನು ತುಂಬ ಸುಂದರವಾಗಿ ತಯಾರಿಸುತ್ತಿದ್ದರು. ಅಲ್ಲಿಂದ ಸ್ವಲ್ಪದೂರದಲ್ಲೇ ಕೋಟೆ ಕೊತ್ತಳಗಳಿಂದ ಕೂಡಿದ ಮಂದಾರಣ ಗ್ರಾಮವಿತ್ತು.[4] ಅಲ್ಲಿನ ಸೊಳ್ಳೆಪರದೆ ಹಾಗೂ ಅಡ್ಡಪಂಚೆ ಬಹಳ ಪ್ರಸಿದ್ಧ. ಕಲ್ಕತ್ತೆಯಿಂದ ಬರುವ ಭಕ್ತರಿಗಾಗಿ ಇವೆಲ್ಲವನ್ನೂ ಖರೀದಿಸಿ ತರಬೇಕಾಗಿತ್ತು. ಇವೆಲ್ಲ ಪ್ರಾಸಂಗಿಕ ವಿಷಯ. ಈಗ ನಾವು ನೋಡಬೇಕಾಗಿರುವ ವಿಷಯಕ್ಕೆ ಮತ್ತೆ ಬರೋಣ.

ಕ್ರಿ.ಶ. ೧೯೦೫ನೇ ಇಸವಿಯಲ್ಲಿ ನಡೆದ ಜಗದ್ಧಾತ್ರೀ ಪೂಜೆಗೆ ಕಲ್ಕತ್ತೆಯಿಂದ ಸಾಮಾನುಗಳನ್ನು ಹೊತ್ತುಕೊಂಡು ಹೋದಾಗ, ಶ್ರೀಮಾತೆ ಪೂಜೆಯ ಕೆಲಸಗಳಲ್ಲಿ ಸಂಪೂರ್ಣ ತೊಡಗಿಕೊಂಡಿದ್ದರು. ಏಕೆಂದರೆ, ಹಿಂದಿನ ವರ್ಷ ಅವರು ಕಲ್ಕತ್ತೆಯಲ್ಲಿದ್ದುದರಿಂದ ಪೂಜೆಗೆ ಬಂದಿರಲಿಲ್ಲ. ಈ ಬಾರಿ ಪೂಜೆಯ ಮೊದಲನೆಯ ದಿನ ಸುಮಾರು ಹನ್ನೆರಡು ಗಂಟೆಯವರೆಗೆ ಶ್ರೀಮಾತೆ ಬಿಡುವಿಲ್ಲದೆ ಕೆಲಸ ಮಾಡಿದ್ದರಿಂದ, ಅತ್ಯಂತ ಬಳಲಿದ್ದರು. ಅಲ್ಲಿಯವರೆಗೆ ಅವರು ನೀರನ್ನು ಕೂಡ ಕುಡಿದಿರಲಿಲ್ಲ. ಬಹಳ ಪ್ರಾರ್ಥಿಸಿಕೊಂಡ ನಂತರ ಅವರು ಶ್ರೀಠಾಕೂರರ ಪೂಜೆಗೆ ಕುಳಿತರು. ಸೇವಕನನ್ನು ಅವರು ಬಾಗಿಲಲ್ಲಿ ಕುಳಿತಿರಲು ಹೇಳಿದರು. ಪೂಜೆಯ ನಡುವೆ ಅವರಿಗೆ ತೊಂದರೆಯಾಗದಿರಲಿ ಎಂದು ಹಾಗೆ ಹೇಳಿದ್ದರು. ಅವನು ಕೂಡಲೇ ಅಲ್ಲಿ ಕುಳಿತು, ಶ್ರೀಮಾತೆಗಾಗಿ ಕಲ್ಲುಸಕ್ಕರೆಯ ಪಾನೀಯವನ್ನು ತಯಾರು ಮಾಡಿದ.

ಪೂಜೆಯ ನಂತರ ಕಲ್ಲುಸಕ್ಕರೆಯ ಪಾನೀಯವನ್ನು ಕುಡಿಯುತ್ತ ಶ್ರೀಮಾತೆ, ''ಇನ್ನು ನಾನು ಅಲ್ಲಿಗೆ (ಪೂಜಾಮಂಟಪಕ್ಕೆ) ಹೋಗಲಾರೆ. ಅವರಾಗಿ ಕರೆಯದಿದ್ದರೆ ಹೋಗಲ್ಲ. ಇಲ್ಲೇ ತುಸು ಕುಳಿತುಕೊಳ್ಳುತ್ತೇನೆ'' ಎಂದರು. ಆಗ ಸೇವಕ[5] ಹೇಳಿದ, ''ಠಾಕೂರ್ ಹಾಗೂ ನೀವು ಮತ್ತೆ ಬರಬೇಕಲ್ಲ ; ಆಗ ಬಾವುಲ್ ಆಗಿ ಬರುತ್ತೀರಿ.'' ತಾಂಬೂಲ ಹಾಕಿಕೊಳ್ಳುತ್ತಿದ್ದ ಶ್ರೀಮಾತೆ ಹೇಳಿದರು, ''ನಿಮಗಾರಿಗೂ ಬಿಡುಗಡೆಯಿಲ್ಲ. ಯಾರು ಈ ಬಾರಿ ಬಂದಿದ್ದೀರೋ, ಪ್ರತಿಯೊಬ್ಬರೂ ಮತ್ತೆ ಬರಲೇಬೇಕು – ಯಾರನ್ನೂ ಬಿಡಲಾಗದು. ಆಕಾಶದಲ್ಲಿ ಚಂದ್ರನನ್ನು ನೋಡಿದ್ದೀಯಲ್ಲಾ? ಚಂದ್ರ ಒಬ್ಬನೇ ಮೇಲೆದ್ದು ಬರುತ್ತಾನೇನು? ನಾಲ್ಕೂ ಕಡೆ ನಕ್ಷತ್ರಗಳನ್ನೆಲ್ಲ ಕರೆದುಕೊಂಡು ಬಂದು, ಅನಂತರ ಅವನು ಬರುತ್ತಾನೆ.'' ಅದಕ್ಕೆ ಸೇವಕ ಹೇಳಿದ, ''ನಾವು ಅದಕ್ಕೆ ತಯಾರು, ನಿಮ್ಮನ್ನಂತೂ ಪಡೆಯುತ್ತೇವಲ್ಲ.''

ಈ ಘಟನೆಯನ್ನು ಬರೆಯುತ್ತಿದ್ದಂತೆ ಇನ್ನೂ ಎರಡು ಘಟನೆಗಳು ನೆನಪಾಗುತ್ತಿವೆ. ಅದನ್ನಿಲ್ಲಿ ಹೇಳಿದರೆ ರಸಭಂಗವಾಗದು. ಮೊದಲನೆಯದು, ಠಾಕೂರರು ಕುಳಿತುಕೊಂಡಿರುವ ಭಾವಚಿತ್ರವನ್ನು ತೆಗೆದಾಗ ಅದರ ನೆಗೆಟಿವ್‌ನಿಂದ ಮೊದಲ ಸಲ ಹನ್ನೆರಡು ಪ್ರತಿಗಳನ್ನು ಮುದ್ರಿಸಲಾಗಿತ್ತು ಎಂದು ನಾನು ಕೇಳಿದ್ದೆ. ಆ ಹನ್ನೆರಡು ಪ್ರತಿಗಳ ಮಾಹಿತಿ ನನಗೆ ತಿಳಿಯದು. ಆದರೆ ನನಗೆ ತಿಳಿದಿರುವ ಮೂರು ಪ್ರತಿಗಳ ವಿವರವನ್ನಿಲ್ಲಿ ನೀಡುತ್ತೇನೆ. ಒಂದು, ಯೋಗಿನ್ ಮಾ ನಿತ್ಯ ಪೂಜೆ ಮಾಡುತ್ತಿದ್ದಳು. ಆ ಪ್ರತಿ ನಾನು ಈ ವಿಷಯವನ್ನು ಹೇಳುವಾಗ ತುಂಬಾ ಅಸ್ಪಷ್ಟವಾಗಿ ಹೋಗಿತ್ತು. ಎರಡನೆಯದು, ಬೇಲೂರು ಮಠದಲ್ಲಿ ಪೂಜೆ ಮಾಡುತ್ತಿದ್ದಾರೆ. ಅದೂ ಹೇಗೋ ತುಸು ಅಸ್ಪಷ್ಟವಾಗಿತ್ತು. ಮೂರನೆಯದು, ಶ್ರೀಮಾತೆಯವರು ಪೂಜೆ ಮಾಡುತ್ತಿದ್ದ ಭಾವಚಿತ್ರ. ಅದು ಅಸ್ಪಷ್ಟವಾಗುವುದಿರಲಿ, ಅದನ್ನು ನೋಡುವಾಗ ಈಗ ತಾನೆ ತೆಗೆದಂತಿತ್ತು. ನಾನು ಈ ವಿಷಯ ಹೇಳುತ್ತಿರುವುದು ಕ್ರಿ.ಶ. ೧೯೧೧ರಲ್ಲಿ.

ಎರಡನೇ ಸಂಗತಿಯೆಂದರೆ ಶ್ರೀಮಾತೆಯವರ ಒಂದು ವಿಶೇಷತೆಯನ್ನು ನಾವು ಗಮನಿಸಿದೆವು. ಕಲ್ಕತ್ತೆಯಿಂದ ಹೊರಡುವ ದಿನದಂದು ಅವರು ಠಾಕೂರರ ಪೂಜೆ ಮುಗಿಸಿ, ಠಾಕೂರರನ್ನು ಕುರಿತು ಹೇಳುತ್ತಿದ್ದರು, ''ನಿಮಗೆ ಕಲ್ಕತ್ತಾದ ಸಂದೇಶ, ರಸಗುಲ್ಲಾ ತುಂಬ ಹಿಡಿಸುತ್ತದೆ ಅಂತೆ ಕಾಣುತ್ತದಲ್ಲ? ಜಯರಾಮಬಾಟಿಯ ಬಡೋಪುಕುರದ ನೀರು, ಹಾಗೂ ತುಳಸಿ ನಿಮಗೆ ರುಚಿಸುತ್ತಿಲ್ಲ, ಅಲ್ಲವೆ?'' ಎಂದು. ಆಗಲೇ ನಾವು ತಿಳಿದುಕೊಳ್ಳಬೇಕು, ಶ್ರೀಮಾತೆ ಊರಿಗೆ (ಅಂದರೆ ಜಯರಾಮಬಾಟಿಗೆ) ಹೊರಡಲು ಸಿದ್ಧರಾಗುತ್ತಿದ್ದಾರೆ ಅಂತ. ಭಕ್ತರುಗಳು ಎಷ್ಟು ಅನುನಯ, ವಿನಯಗಳಿಂದ ಪ್ರಾರ್ಥಿಸಿಕೊಂಡರೂ ಅವರು ಕೇಳುತ್ತಿರಲಿಲ್ಲ.

*(ಮುಂದುವರಿಯುವುದು)*

## ಶಕ್ತಿ – ಜಗನ್ಮಾತೆ

ಅವಳೇ ಸರ್ವಸೃಷ್ಟಿಯಲ್ಲಿರುವ ಶಕ್ತಿ. ಪ್ರತಿಯೊಂದು ಕಾರಣವೂ ಕಾರ್ಯವಾಗುವಂತೆ ಮಾಡುವವಳು ಅವಳೇ. ಅವಳ ಇಚ್ಛೆಯೇ ಏಕಮಾತ್ರ ನಿಯಮ. ಅವಳೆಂದಿಗೂ ತಪ್ಪು ಮಾಡುವುದಿಲ್ಲ. ಅವಳ ಇಚ್ಛೆಯೇ ಪ್ರಕೃತಿ ನಿಯಮ. ಅದನ್ನು ಯಾರೂ ಬದಲಾಯಿಸಲಾರರು. ಅವಳೇ ಕರ್ಮನಿಯಮದ ಪ್ರಾಣ. ಪ್ರತಿಯೊಂದು ಕರ್ಮಕ್ಕೂ ಫಲವನ್ನು ಕೊಡುವವಳು ಅವಳೇ. ಅವಳ ನೇತೃತ್ವದಲ್ಲಿ ನಾವು ನಮ್ಮ ಕರ್ಮದ ಮೂಲಕ ಜೀವನವನ್ನು ರೂಢಿಸಿಕೊಳ್ಳುತ್ತಿರುವೆವು.

– ಸ್ವಾಮಿ ವಿವೇಕಾನಂದ

[4] ಸಾಹಿತ್ಯ ಸಾಮ್ರಾಟ್ ಬಂಕಿಮಚಂದ್ರರ 'ದುರ್ಗೇಶ ನಂದಿನಿ'ಯ ಕಥೆ ನಡೆಯುವುದು ಗಢ ಮಂದಾರಣದಲ್ಲಿ. ಇಲ್ಲಿಂದ ಸ್ವಲ್ಪ ದೂರದಲ್ಲಿರುವ ಕಾಟಾಲಿ ಎಂಬ ಗ್ರಾಮದ ಶಿವಮಂದಿರದಲ್ಲೇ ದುರ್ಗೇಶ ನಂದಿನಿ ಹಾಗೂ ಜಗತ್ ಸಿಂಹ ಇವರಿಬ್ಬರ ಮೊದಲ ಭೇಟಿ ನಡೆಯುವುದು.

[5] ಸ್ವತಃ ಲೇಖಕರು. *(–ಸಂ)*